# ಭಾಗವತ ಭಾವಧಾರೆ

❑ ಡಾ. ಎನ್.ಕೆ. ಉದಯಶಂಕರ್

**ಭಾಗವತದ ಹಿರಿಮೆಯನ್ನೂ ಅದರಲ್ಲಿ ಬರುವ ಭಕ್ತಿಯ ವಿವರಣೆಯನ್ನೂ ಉದಾಹರಣೆಯ ಮೂಲಕ ವರ್ಣಿಸಿರುವ ಶ್ರೀ ಉದಯಶಂಕರ್ ಅವರು ಸುರತ್ಕಲ್ಲಿನಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಭೌತ ಶಾಸ್ತ್ರದ ಪ್ರಾಧ್ಯಾಪಕರಾಗಿರುವರು.**

ಭಾರತೀಯ ಸಂಸ್ಕೃತಿಯ ವಿಕಾಸಕ್ಕೆ ಪುರಾಣ ವಾಙ್ಮಯವು ನೀಡಿದ ಕೊಡುಗೆ ಮಹತ್ತರವಾದುದು. ಪುರಾಣಗಳು ಹಿಂದೂ ಧರ್ಮದ ಪ್ರಾಚೀನ ಕಥಾಸಾಹಿತ್ಯವಾಗಿದ್ದು ಸಾಂಸಾರಿಕ ಜೀವನ ವನ್ನು ಸಾಗಿಸುತ್ತಲೇ ಪರಮಾರ್ಥ ಸಾಧನೆಯನ್ನು ಮಾಡುವ ಬಗೆ, ತೀರ್ಥಯಾತ್ರೆ, ಉಪಾಸನಾ ವಿಧಿ, ಚತುರ್ವಿಧ ಪುರುಷಾರ್ಥಗಳು, ವರ್ಣಾಶ್ರಮ ಧರ್ಮ, ಪ್ರಾಯಶ್ಚಿತ್ತ—ಇತ್ಯಾದಿ ಹತ್ತು ಹಲವು ವಿಷಯಗಳನ್ನು ಬೋಧಿಸುತ್ತವೆ. ಸಮಾಜದ ಎಲ್ಲ ವರ್ಗದ ಜನ ರನ್ನೂ, ಎಲ್ಲ ಮನೋಭಾವದ ಜನರನ್ನೂ ರಂಜಿಸಿ, ಶಿಕ್ಷಣ ವನ್ನೀಯುವ ಗುರಿಯನ್ನು ಹೊಂದಿರುವ ಪುರಾಣಗಳು ತತ್ತ್ವ ಜ್ಞಾನ, ನಿವೃತ್ತಿಮಾರ್ಗ ಹಾಗೂ ಪ್ರವೃತ್ತಿಮಾರ್ಗಗಳ ಕುರಿತಾದ ಗಂಭೀರ ಚಿಂತನೆಗಳನ್ನು ಒಳಗೊಂಡಿವೆ. ಸ್ಥೂಲವಾಗಿ ಹೇಳು ವುದಾದರೆ ವೇದಗಳಲ್ಲಿ ಪ್ರತಿಪಾದಿತವಾದ ಆಧ್ಯಾತ್ಮಿಕ ಸತ್ಯಗಳ ಮೂರ್ತಚಿತ್ರಣಗಳೇ ಪುರಾಣಗಳೆನ್ನಬಹುದು. ಶ್ರೀಮದ್ ಭಾಗವತವು ಪುರಾಣಗಳಲ್ಲೆಲ್ಲ ಅತ್ಯಂತ ಜನಪ್ರಿಯವಾಗಿರುವುದು ಮಾತ್ರವಲ್ಲದೆ ವೈಷ್ಣವರಿಗೆ ಅದು ಅತಿ ಮುಖ್ಯವಾದ ಪ್ರಮಾಣ ಗ್ರಂಥವೂ ಆಗಿದೆ. ಹದಿನೆಂಟು ಮಹಾಪುರಾಣಗಳಲ್ಲಿ ಭಾಗವತವು ಸಾತ್ತ್ವಿಕ ಪುರಾಣವೆಂದು ಪರಿಗಣಿಸಲ್ಪಟ್ಟಿದ್ದು ಅದರಲ್ಲಿ ಕಾವ್ಯ ಗುಣಗಳೂ ತತ್ತ್ವವಿಚಾರಗಳೂ ಅತ್ಯಂತ ಸುಂದರವಾಗಿ ಸಮನ್ವಯ ಗೊಂಡಿರುವುದನ್ನು ಕಾಣಬಹುದು. ಲೋಕಾತಿಶಯ ಕಮನೀಯ ವಿಗ್ರಹನಾದ ಶ್ರೀಕೃಷ್ಣಪರಮಾತ್ಮನ ದಿವ್ಯಲೀಲೆಗಳೂ ಅನೇಕ ಭಗವದ್ಭಕ್ತರ ಪುಣ್ಯಕಥೆಗಳೂ ಸಮೃದ್ಧಿಯಾಗಿ ತುಂಬಿರುವ ಈ ರಸಗಂಗೆಯನ್ನು ಉದ್ದೇಶಿಸಿಯೇ ಪುರಾಣಕರ್ತೃಗಳಾದ ಭಗವಾನ್ ವ್ಯಾಸರು ಹೇಳುತ್ತಾರೆ—**ಪಿಬತ ಭಾಗವತಂ ರಸಮಾಲಯಂ, ಮುಹುರಹೋ ರಸಿಕಾ ಭುವಿ ಭಾವುಕಾಃ** (೧.೬.೮೦)—"ರಸದ ಸಾಗರವಾದ ಭಾಗವತವನ್ನು ರಸಿಕರೂ ಭಾವುಕರೂ ಆದ ನೀವು ಮತ್ತೆ ಮತ್ತೆ ಕುಡಿಯಿರಿ" ಎಂಬುದಾಗಿ. ಹರಿಭಕ್ತಿಪಾರಮ್ಯವನ್ನು ಅತ್ಯಂತ ಹೃದಯಂಗಮವಾಗಿ ವರ್ಣಿಸುವ ಭಾಗವತ ಗ್ರಂಥರತ್ನ ವನ್ನು ಉದ್ದೇಶಿಸಿ ಶ್ರೀರಾಮಕೃಷ್ಣ ಪರಮಹಂಸರು ಹೇಳಿದ ಮಾತು ಮನೋಜ್ಞವಾಗಿದೆ : "ಇದು ಜ್ಞಾನದ ಬೆಣ್ಣೆಯಲ್ಲಿ ಕರಿದು ಪ್ರೀತಿಯ ಮಧುವಿನಲ್ಲಿ ಮುಳುಗಿಸಲ್ಪಟ್ಟಿದೆ."

ಶ್ರೀಮದ್‌ಭಾಗವತವು ವೇದಶಾಸ್ತ್ರಗಳಂತೆ ಪ್ರಭುಸಂಮಿತೆ, ಪುರಾಣೇತಿಹಾಸಗಳಂತೆ ಸುಹೃತ್ ಸಂಮಿತೆ ಮತ್ತು ಕಾವ್ಯ ನಾಟಕಾದಿ ಗಳಂತೆ ಕಾಂತಾಸಂಮಿತ—ಇವು ಮೂರನ್ನೂ ಒಳಗೊಂಡಿದೆಯೆಂದು ಬೋಪದೇವನು ಅಭಿಪ್ರಾಯ ಪಡುತ್ತಾನೆ. ಧರ್ಮದ ಪ್ರಮಾಣ ಗಳಲ್ಲಿ ಶ್ರುತಿ, ಸ್ಮೃತಿ ಮತ್ತು ಇತಿಹಾಸ-ಪುರಾಣಗಳನ್ನು ಅವರೋಹಣ ಕ್ರಮದಲ್ಲಿ ಗಣಿಸುವುದು ವಾಡಿಕೆ. ಶ್ರೀಮದ್ಭಾಗವತದಲ್ಲಿ ಪ್ರತಿಪಾದಿತವಾದ ದಾರ್ಶನಿಕ ಹಾಗೂ ವೇದಾಂತ ವಿಚಾರಗಳನ್ನು ನೋಡಿದರೆ ನಿಗಮಕಲ್ಪತರೋರ್ಗಲಿತಂ ಫಲಂ—"ವೇದಕಲ್ಪತರುವಿನ ಮಾಗಿದ ಫಲ"—ಎಂಬ ಹೆಗ್ಗಳಿಕೆಗೆ ಪಾತ್ರವಾದ ಈ ಪುರಾಣವು ಬ್ರಹ್ಮಸೂತ್ರ, ಗೀತೆ ಮತ್ತು ಉಪನಿಷತ್ತುಗಳಂತೆ ಪ್ರಥಮಪ್ರಮಾಣಕ್ಕೂ ಯೋಗ್ಯವಾಗಿದೆ ಎನ್ನ ಬಹುದು. ಆದ್ದರಿಂದಲೇ ಶ್ರೀವಲ್ಲಭಾಚಾರ್ಯರು ಭಾಗವತವನ್ನು ವೇದವ್ಯಾಸರ "ಸಮಾಧಿಭಾಷೆ"ಯೆಂದು ಘೋಷಿಸಿರುತ್ತಾರೆ. ಭಾಗವತ ತತ್ತ್ವಸರಣಿಗಳು ಅನೇಕ ಭಕ್ತಿಪಂಥಗಳನ್ನು ಹುಟ್ಟು ಹಾಕಿ ಅವುಗಳನ್ನು ಪೋಷಿಸಿಕೊಂಡು ಬಂದಿವೆ. ಗೀತೆಯನ್ನು ಬಿಟ್ಟರೆ ಅತ್ಯಧಿಕ ಸಂಖ್ಯೆಯ ವ್ಯಾಖ್ಯಾನಗಳನ್ನು ಹೊಂದಿರುವ ಭಾಗವತ ಗ್ರಂಥವು ವೇದಾಂತಸಂಪ್ರದಾಯದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶುದ್ಧಾದ್ವೈತ, ದ್ವೈತಾದ್ವೈತ ಇತ್ಯಾದಿ ಅನೇಕ ಶಾಖೋಪಶಾಖೆಗಳಿಗೆ ಪ್ರೇರಣೆ, ಪೋಷಣೆಗಳನ್ನು ನೀಡಿರುವು ದನ್ನು ಕಾಣಬಹುದು.

ಭಗವದ್ಭಕ್ತಿಯನ್ನು ಅತ್ಯಂತ ಹೃದಯಸ್ಪರ್ಶಿಯಾಗಿ ವರ್ಣಿಸುವ ಭಾಗವತ ಪುರಾಣವು ವೇದಾಂತಪ್ರತಿಪಾದ್ಯವಾದ ಜನ್ಮಾದ್ಯಸ್ಯ ಯತಃ ಎಂದು ತೊಡಗುವ ಬಾದರಾಯಣ ಸೂತ್ರದಿಂದ ವಿಸ್ತರಿಸಲ್ಪಡುವ ಕಾಲತ್ರಯಾನವಚ್ಛಿನ್ನ ಪರಮಸತ್ಯದ ಅನ್ವೇಷಣೆ ಯನ್ನೂ ಬೋಧಿಸುತ್ತದೆ. ಸರ್ವವೇದಾಂತ ಸಾರವೇ ಶ್ರೀಮದ್ ಭಾಗವತರೂಪದಲ್ಲಿದೆ. ಬ್ರಹ್ಮಾತ್ಮೈಕ್ಯವೇ ವೇದಾಂತದ ಸಾರ, ಕೈವಲ್ಯಪ್ರಾಪ್ತಿಯೇ ಅದರ ಪ್ರಯೋಜನವೆಂದು ಹೇಳಿರುತ್ತಾರೆ. ಭಾಗವತದಲ್ಲಿರುವ ಭಕ್ತಿ, ಜ್ಞಾನ, ವೈರಾಗ್ಯಗಳ ತ್ರಿವೇಣೀ ಸಂಗಮವನ್ನು ಸಂದರ್ಶಿಸಿ ಮನುಷ್ಯನು ತನ್ನ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಬಹುದು.

ಮನುಷ್ಯನ ಹೃದಯದಲ್ಲಿ ಭಗವಂತನ ಬಗ್ಗೆ ಇರುವ ಪರಮ ಪ್ರೇಮರೂಪವಾದ ಭಾವನೆಯೇ ಭಕ್ತಿಯೆಂದು ಸರಳವಾಗಿ ಹೇಳ ಬಹುದು. ಈ ಭಕ್ತಿಯೊಡನೆ ಜ್ಞಾನ-ವೈರಾಗ್ಯಗಳಿಲ್ಲದಿದ್ದರೆ ಅದು ಶೋಭಿಸಲಾರದು. ಅಂತಃಕರಣವನ್ನು ಶುದ್ಧೀಕರಿಸುವುದೇ ಭಕ್ತಿಯ ಕೆಲಸ. ಮಾನವನ ಹೃದಯವನ್ನು ಪವಿತ್ರೀಕರಿಸಿ ಅಲ್ಲಿ ಭಜನೀಯ ವಸ್ತುವಿನ ಸ್ವರೂಪವು ಪ್ರಕಟವಾಗುವಂತೆ ಭಕ್ತಿಯು ಮಾಡುತ್ತದೆ. ಭಕ್ತಿಯ ಫಲವೇನು ಎಂದರೆ ಜ್ಞಾನ-ವೈರಾಗ್ಯಗಳು. ಆದುದರಿಂದ ಭಕ್ತಿಯು ಜಾಗೃತವಾದಾಗ ಪರಮಾರ್ಥಜ್ಞಾನ ಉಂಟಾಗುತ್ತದೆ ಮತ್ತು ಸಂಸಾರದಲ್ಲಿರುವ ಬಂಧಕಾರಕ ವಿಷಯಗಳಲ್ಲಿ ವೈರಾಗ್ಯ ಪ್ರಾಪ್ತಿಯಾಗುತ್ತದೆ. ಶ್ರೀಮದ್ಭಾಗವತವು ಇವು ಮೂರರ ತ್ರಿವೇಣೀ

ಸಂಗಮವೆಂದು ಹೇಳಲು ಇದೇ ಕಾರಣ. ಭಾಗವತದುದ್ದಕ್ಕೂ ತೋರಿಬರುವ ಭಕ್ತಿಧಾರೆಗಳಲ್ಲಿ ಕೆಲವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಉದಾಹರಣೆಗೆ, ಶ್ರೀಕೃಷ್ಣ ಪರಮಾತ್ಮನು ರಾಜಮಾರ್ಗದಲ್ಲಿ ಹೋಗುತ್ತಿದ್ದಾಗ ದ್ವಾರಕಾನಗರಿಯ ಕುಲಸ್ತ್ರೀಯರು ಆತನ ದರ್ಶನವನ್ನೇ ಪರಮಾನಂದ ಮಹೋತ್ಸವವನ್ನಾಗಿ ಭಾವಿಸಿ ಅದಕ್ಕಾಗಿ ಎತ್ತರವಾದ ಉಪ್ಪರಿಗೆಗಳನ್ನೇರಿದರಂತೆ. ಪರಮಾತ್ಮನ ಮುಖಾರವಿಂದವು ಕಣ್ಣುಗಳಿಂದ ಪಾನಮಾಡಲು ಸೌಂದರ್ಯದ ಸುಧೆಯಿಂದ ತುಂಬಿದ ಪಾತ್ರೆಯೋಪಾದಿಯಲ್ಲಿತ್ತು, ಅವನ ಭುಜಗಳಾದರೋ ಲೋಕಪಾಲಕರಿಗೇ ಶಕ್ತಿಯನ್ನು ತುಂಬುವಂತಿದ್ದುವು ಮತ್ತು ಚರಣಕಮಲಗಳು ಭಕ್ತರೆಂಬ ಹಂಸಗಳಿಗೆ ಆಶ್ರಯಸ್ಥಾನವಾಗಿದ್ದುವು—ಎಂದು ಮನೋಜ್ಞವಾಗಿ ವರ್ಣಿಸಲಾಗಿದೆ.

ಶ್ರೀಕೃಷ್ಣನ ಪರಮಭಕ್ತೆಯಾದ ಕುಂತಿದೇವಿಯು ಬೇಡಿದ ವರದಾನವು ಪ್ರಾಯಶಃ ಅತೀವ ವಿಲಕ್ಷಣವಾದುದೇ ಆಗಿದೆ:

ವಿಪದಃ ಸಂತು ನಃ ಶಶ್ವತ್ ತತ್ರ ತತ್ರ ಜಗದ್ಗುರೋ ।
ಭವತೋ ದರ್ಶನಂ ಯತ್ ಸ್ಯಾತ್ ಅಪುನರ್ಭವದರ್ಶನಂ ॥
(೧.೮.೨೫)

"ಪ್ರಭೋ! ನನ್ನ ಜೀವನದಲ್ಲಿ ಪದೇ ಪದೇ ಕಷ್ಟಗಳು ಬರುತ್ತಿರಲಿ; ಆ ಕಷ್ಟಗಳು ಬಂದಾಗ ನಿನ್ನ ಸ್ಮರಣೆಯಾಗುತ್ತದೆ. ನಮ್ಮ ಕಷ್ಟಗಳನ್ನು ನಿವಾರಿಸಲು ಬಂದು ನೀನು ನಮಗೆ ದರ್ಶನವನ್ನು ಅನುಗ್ರಹಿಸುವೆ" ಎಂಬುದಾಗಿ ಕುಂತಿಯು ತನ್ನ ಭಕ್ತಿಯನ್ನು ಪ್ರಕಟಪಡಿಸಿದ್ದಾಳೆ.

ಶುಕದೇವರು ಶ್ರೀಮದ್ಭಾಗವತೋಪದೇಶಕ್ಕೆ ತೊಡಗುವ ಮುನ್ನ ಮಾಡುವ ಮಂಗಳಾಚರಣೆಯು ಭಕ್ತಿರಸದಿಂದ ಓತಪ್ರೋತವಾಗಿರುವುದನ್ನು ಗಮನಿಸಬಹುದು:

ಕಿರಾತಹೂಣಾಂಧ್ರಪುಳಿಂದಪುಲ್ಕಸಾ
ಆಭೀರಕಾಶಾ ಯವನಾಃ ಖಸಾದಯಃ ।
ಯೇಽನ್ಯೇ ಚ ಪಾಪಾಯದುಪಾಶ್ರಯಾಶ್ರಯಾಃ
ಶುಧ್ಯಂತಿ ತಸ್ಮೈ ಪ್ರಭವಿಷ್ಣವೇ ನಮಃ ॥

"ಯಾರ ಸ್ಮರಣೆಯಿಂದ ಅಪವಿತ್ರನೂ ಪವಿತ್ರನಾಗುವನೋ ಅವನೇ ಪಾವನನು. ಭಗವಂತನ ಸ್ಮರಣೆಯಿಂದ, ಅವನ ಆಶ್ರಯ ಸ್ವೀಕಾರದಿಂದ ಕಿರಾತರು, ಹೂಣರು, ಆಂಧ್ರರು, ಪುಳಿಂದರು, ಪುಲ್ಕಸರು (ಕಟುಕರು)—ಎಲ್ಲರೂ ಪವಿತ್ರರಾಗುತ್ತಾರೆ. ಆದ್ದರಿಂದ ಪ್ರಭೋ! ನೀನು ನನ್ನ ವಾಣಿಯನ್ನು ಅಲಂಕರಿಸಿ, ಕರ್ಣರಂಧ್ರಗಳ ಮೂಲಕ ಭಕ್ತರ ಹೃದಯವನ್ನು ಪ್ರವೇಶಿಸು!"

ನಂದಗೋಕುಲಕ್ಕೆ ಹೋಗುತ್ತಿದ್ದಾಗ ಅಲ್ಲಿನ ಭೂಮಿಯ ಧೂಳಿನಲ್ಲಿ ಶ್ರೀಕೃಷ್ಣಪರಮಾತ್ಮನ ಪಾದಚಿಹ್ನೆಗಳು ಅಂಕಿತವಾಗಿರುವುದನ್ನು ಕಂಡು ಅಕ್ರೂರನೆಂಬ ಭಾಗವತೋತ್ತಮನು ಪ್ರೇಮಾನಂದ ವಶನಾಗಿ ಅದರಲ್ಲಿ ಹೊರಳಾಡಿದನೆಂದು ಭಾಗವತದ ತೃತೀಯ ಸ್ಕಂಧದಲ್ಲಿ ವರ್ಣಿಸಿದೆ.

ವಾಸುದೇವನೆಂದರೆ—ವಸತೀತಿ ವಾಸುಃ—ಎಲ್ಲ ಪ್ರಾಣಿಗಳ ಹೃದಯದಲ್ಲಿ ವಾಸಿಸುವನು, ದೇವನೆಂದರೆ—ದೀವ್ಯತೇತಿ ದೇವಃ—ಸತ್-ಚಿತ್-ರೂಪಗಳಲ್ಲಿ ಬೆಳಗುತ್ತಿರುವವನು. ಅಂತಹ ಸರ್ವಹೃದಯ ನಿವಾಸಿ, ಸರ್ವಾತ್ಮಾ ಭಗವಾನ್ ವಾಸುದೇವನಲ್ಲಿ ಪ್ರೀತಿಯುಂಟಾಗದಿದ್ದರೆ ಈ ದೇಹಸಂಬಂಧದಿಂದ ವಿರಮಿಸಲು ಸಾಧ್ಯವಿಲ್ಲ ಎಂಬ ಮಾತು ಭಗವಾನ್ ಋಷಭದೇವನ ಉಪದೇಶಗಳಲ್ಲಿ ವ್ಯಕ್ತವಾಗಿದೆ. ಭಾಗವತದ ಷಷ್ಠ ಸ್ಕಂಧದಲ್ಲಿ ವೃತ್ರನು ಭಗವದ್ರೂಪವನ್ನು ಕುರಿತು ಮಾಡಿದ ಸ್ತುತಿಯಲ್ಲಿ ಕಾವ್ಯರಸವು ನಿಚ್ಚಳವಾಗಿ ಪ್ರವಹಿಸಿದೆ ಎನ್ನಬೇಕು:

ಅಜಾತಪಕ್ಷಾ ಇವ ಮಾತರಂ ಖಗಾಃ
ಸ್ತನ್ಯಂ ಯಥಾ ವತ್ಸತರಾಃ ಕ್ಷುಧಾರ್ತಾಃ ।
ಪ್ರಿಯಂ ಪ್ರಿಯೇವ ವ್ಯುಷಿತಃ ವಿಷಣ್ಣಾ
ಮನೋಽರವಿಂದಾಕ್ಷ ದಿದೃಕ್ಷತೇ ತ್ವಾಮ್ ॥ (೬.೧೧.೨೬)

"ಹೇ ಕಮಲಾಕ್ಷ! ಪಕ್ಷಿಯು ಕಾಳನ್ನು ತರಲು ಹೊರಕ್ಕೆ ಹೋಗಿರುವಾಗ, ಅದರ ಮರಿಗಳು (ಇನ್ನೂ ರೆಕ್ಕೆಯೇ ಮೂಡಿಲ್ಲ) ಪಕ್ಷಿಯ ದಾರಿಯನ್ನು ಕಾಯುತ್ತಿರುವಂತೆ, ಕಾಡಿಗೆ ಮೇಯಲು ಹೋಗಿರುವ ತಾಯಿಹಸುವನ್ನು ಎಳೆಗರುವು ನಿರೀಕ್ಷಿಸುವಂತೆ, ಪ್ರವಾಸದಲ್ಲಿರುವ ಪತಿಯನ್ನು ನಿರೀಕ್ಷಿಸುವ ಪತ್ನಿಯಂತೆ ನನ್ನ ಮನಸ್ಸು ನಿನ್ನ ದರ್ಶನಕ್ಕಾಗಿ ಕಾತರದಿಂದ ಕಾಯುತ್ತಿದೆ."

ನವಮ ಸ್ಕಂಧದ ೨೧ನೇ ಅಧ್ಯಾಯದಲ್ಲಿ ರಂತಿದೇವನ ಕಥೆ ರಮ್ಯವಾಗಿ ಮೂಡಿಬಂದಿದೆ. ರಂತಿದೇವನು ನೀರಡಿಕೆಯಿಂದ ತಾನೂ ತನ್ನ ಕುಟುಂಬವರ್ಗದವರೂ ಮರಣಾವಸ್ಥೆಯಲ್ಲಿದ್ದರೂ ಉಳಿದಿದ್ದ ಒಬ್ಬರಿಗಾಗುವಷ್ಟು ನೀರನ್ನು ಚಂಡಾಲನೊಬ್ಬನಿಗೆ ಕುಡಿಯಲು ಕೊಟ್ಟು, ಹೇಳುವ ಮಾತುಗಳು ಸಹೃದಯರ ಚಿತ್ತಭಿತ್ತಿಯಲ್ಲಿ ಶಾಶ್ವತವಾಗಿ ನಿಲ್ಲುತ್ತವೆ:

ನ ಕಾಮಯೇಽಹಂ ಗತಿಮೀಶ್ವರಾತ್ಪರಾ-
ಮಷ್ಟರ್ಧಿಯುಕ್ತಾಮಪುನರ್ಭವಂ ವಾ ।
ಆರ್ತಿಂ ಪ್ರಪದ್ಯೇಽಖಿಲದೇಹಭಾಜಾ-
ಮಂತಃಸ್ಥಿತೋ ಯೇನ ಭವಂತ್ಯದುಃಖಾಃ ॥ (೯.೨೧.೧೨)

"ನಾನು ಭಗವಂತನಿಂದ ಅಣಿಮಾದಿ ಅಷ್ಟಸಿದ್ಧಿಗಳಿಂದ ಯುಕ್ತವಾದ ಪರಮಪದವನ್ನು ಕೇಳುವುದಿಲ್ಲ. ಹುಟ್ಟುಸಾವುಗಳಿಲ್ಲದ ಮೋಕ್ಷಪದವಿ ಬೇಕೆಂದೂ ನಾನು ಬಯಸುವುದಿಲ್ಲ. ಸಮಸ್ತ ಪ್ರಾಣಿಗಳ ಹೃದಯದಲ್ಲಿರಲು ನಾನು ಬಯಸುವೆ ಮತ್ತು ಅವುಗಳ ಹೃದಯದಲ್ಲಿದ್ದು ಅವುಗಳ ಎಲ್ಲ ಕಷ್ಟಗಳನ್ನು ಭರಿಸಲು ನಾನು ಅಪೇಕ್ಷಿಸುತ್ತೇನೆ. ಹೀಗೆ ಮಾಡುವುದರಿಂದ ಯಾವ ಪ್ರಾಣಿಯೂ ದುಃಖದಲ್ಲಿರಬಾರದೆಂಬುದೇ ನನ್ನ ಅಪೇಕ್ಷೆಯಾಗಿದೆ." ದಯಾರ್ದ್ರ ಹೃದಯದಿಂದ ಬಂದ ಈ ಮಾತುಗಳಲ್ಲಿ ಕರುಣಾರಸದ ಕೋಡಿ ಹರಿದಿರುವುದನ್ನು ಕಾಣಬಹುದು.

ಶ್ರೀಮದ್ಭಾಗವತದ ದಶಮ ಸ್ಕಂಧವು ಅತ್ಯಂತ ಪ್ರಧಾನವಾದ ಭಾಗವಾಗಿದ್ದು, ಅದರಲ್ಲಿ ಶ್ರೀಕೃಷ್ಣಪರಮಾತ್ಮನು ಬಾಲ್ಯ,

ಕೌಮಾರಾವಸ್ಥೆಗಳಲ್ಲಿ ಆಡಿದ ದಿವ್ಯಲೀಲಾ ವಿನೋದಗಳು ಅತ್ಯಂತ ಮನೋಜ್ಞವಾಗಿ ಚಿತ್ರಿಸಲ್ಪಟ್ಟಿವೆ. ಉದಾಹರಣೆಗಾಗಿ ಶ್ರೀಕೃಷ್ಣನು ಯಶೋದೆಗೆ ಹೇಳುತ್ತಾನೆ:

ನಾಹಂ ಭಕ್ಷಿತವಾನಂಬ ಸರ್ವೇ ಮಿಥ್ಯಾಭಿಶಂಸಿನಃ ।
ಯದಿ ಸತ್ಯಗಿರಸ್ತರ್ಹಿ ಸಮಕ್ಷಂ ಪಶ್ಯ ಮೇ ಮುಖಮ್ ॥

(೧೦-೮-೩೫)

"ಅಮ್ಮ! ನಾನು ಖಂಡಿತವಾಗಿಯೂ ಮಣ್ಣು ತಿನ್ನಲಿಲ್ಲವಮ್ಮಾ, ಇವರೆಲ್ಲರೂ ಸುಳ್ಳರು. ಬೇಕಾದರೆ ನೀನೇ ಪ್ರತ್ಯಕ್ಷವಾಗಿ ನನ್ನ ಬಾಯನ್ನು ನೋಡು." ಆತನು ಬಾಯ್ದೆರೆದಾಗ ಆತನ ಬಾಯೊಳಗೆ ಹದಿನಾಲ್ಕು ಲೋಕಗಳನ್ನು ಕಂಡು ಆಕೆಯು ಮೊದಲು ಭಯಗ್ರಸ್ತಳಾಗಿ ಮತ್ತೆ ಸಮಾಧಾನ ತಂದುಕೊಳ್ಳುವಳು. ತಾಯಿ ಯಶೋದೆಯು ಆತನನ್ನು ಕಟ್ಟಿಹಾಕಲು ಯಾವ ಯಾವುದೇ ಹಗ್ಗವನ್ನು ತಂದರೂ ಅದು ಆತನ ಹೊಟ್ಟೆಯನ್ನು ಸುತ್ತಲು ಸಾಕಾಗದೆ ಎರಡು ಅಂಗುಲ ಕಡಮೆಯೇ ಆಗುವುದು. ಶ್ರೀಕೃಷ್ಣನ ಪುಟ್ಟಸೊಂಟಕ್ಕೆ ಹಗ್ಗವನ್ನು ಕಟ್ಟಲು ಸಾಧ್ಯವಾಗದಿದ್ದುದಕ್ಕೆ ಎಲ್ಲರಿಗೂ ನಗು ಬಂತು. ಯಶೋದೆಯು ಬಹಳ ಆಯಾಸದಿಂದ ಬೆವೆತಿದ್ದಳು. "ಅಯ್ಯೋ ಪಾಪ"—ಎನಿಸಿತು ಶ್ರೀಕೃಷ್ಣನಿಗೆ. ಕರುಣಾನಿಧಿಯಾದ ಆ ಪರಮಾತ್ಮನು ಒಡನೆಯೇ ಆಕೆಯ ಬಂಧನಕ್ಕೊಳಗಾದನು—**ದೃಷ್ಟ್ವಾ ಪರಿಶ್ರಮಂ ಕೃಷ್ಣಃ ಕೃಪಯಾಸೀತ್ ಸ್ವಬಂಧನೇ.** ಆಗ ಯಶೋದೆಯು ಆತನನ್ನು ಹಗ್ಗದಿಂದ ಒರಳುಕಲ್ಲಿಗೆ ಕಟ್ಟಲು ಸಮರ್ಥಳಾದಳು.

ಗೋಪಿಯರು ಶ್ರೀಕೃಷ್ಣನ ವೇಣುಗಾನವನ್ನು ಕೇಳಿ ಸಾಂಸಾರಿಕ ಕಾಮನೆಗಳನ್ನು ಪರಿತ್ಯಜಿಸಿದರು. ಶ್ರೀಕೃಷ್ಣವಿಷಯಕವಾದ ಕಾಮನೆ ಮಾತ್ರ ಅವರ ಮನಸ್ಸಿನಲ್ಲಿ ಉಳಿದುಕೊಂಡಿತು.

ಶ್ರೀಮದ್‌ಭಾಗವತದಲ್ಲಿ ವರ್ಣಿತವಾದ ಶ್ರೀಕೃಷ್ಣನ ರಾಸಕ್ರೀಡೆಯು ಕ್ಷುದ್ರಕಾಮವಿಕಾರಗಳಿಂದ ನಿರ್ಮುಕ್ತವಾಗಿದೆ. **ರೇಮೇ ರಮೇಶೋ ವ್ರಜಸುಂದರೀಭಿಃ ಯಥಾರ್ಭಕಃ ಸ್ವಪ್ರತಿಬಿಂಬವಿಭ್ರಮಃ** (೧೦-೧೩-೧೭)—"ಶಿಶುವು ದರ್ಪಣದಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಂಡು ಆಟವಾಡುವಂತೆ ಕೃಷ್ಣನು ರಾಸಲೀಲೆಯನ್ನು ನಡೆಸಿದ" ಎಂದು ವರ್ಣಿಸಲಾಗಿದೆ. ಇಲ್ಲಿ ಗೋಪಿಕೆಯರ ನಿರ್ಮಲಪ್ರೇಮವನ್ನು ವರ್ಣಿಸಿದವನು ಆಜನ್ಮ ಪರಿಶುದ್ಧನಾದ ವ್ಯಾಸತನಯನಾದ ಶುಕಮಹರ್ಷಿ. ಸ್ವಾಮಿ ವಿವೇಕಾನಂದರು ಹೇಳುವಂತೆ, ಕೃಷ್ಣ-ಗೋಪಿಕೆಯರ ಪರಿಶುದ್ಧ ಪ್ರೇಮಲೀಲೆಗಳನ್ನು ಅರ್ಥಮಾಡಿಕೊಳ್ಳಲು ಪೂರ್ಣ ಬ್ರಹ್ಮಚರ್ಯ ಮತ್ತು ಮನಸ್ಸಿನ ಪವಿತ್ರತೆಯ ಆವಶ್ಯಕತೆಯಿದೆ. ಪಾಶ್ಚಾತ್ಯ ಬುದ್ಧಿಜೀವಿಗಳು ಕೃಷ್ಣನನ್ನು ಅರ್ಥ ಮಾಡಿಕೊಳ್ಳಲಾಗದೆ ಈ ಪ್ರಸಂಗಕ್ಕೆ ಅಪಾರ್ಥವನ್ನು ಕಲ್ಪಿಸಿ ಉದ್ದೇಶಿತ ಗುರಿಯಿಂದ ವಂಚಿತರಾಗಿದ್ದಾರೆ. ರಾಸಪಂಚಾಧ್ಯಾಯಿಯ ಶ್ರವಣಫಲವನ್ನು ಈ ರೀತಿ ಹೇಳಲಾಗಿದೆ: **ಹೃದ್ರೋಗಮಾಶ್ವಪಹಿನೋತ್ಯಚಿರೇಣ ಧೀರಃ** —"ಇದನ್ನು ಪಠಿಸುವರು ಭಗವದ್ಭಕ್ತಿ ಸಂಪನ್ನರಾಗುತ್ತಾರೆ ಮತ್ತು ಹೃದ್ರೋಗರಹಿತರಾಗುತ್ತಾರೆ" (೧೦-೩೩-೪೦). ದಶಮ ಸ್ಕಂಧದ ೪೭ನೇ ಅಧ್ಯಾಯದಲ್ಲಿ ಗೋಪಿಕೆಯರ ಭಕ್ತಿಯನ್ನು ವರ್ಣಿಸಿರುವುದು ಹೀಗೆ:

ಆಸಾಮಹೋ ಚರಣರೇಣುಜುಷಾಮಹಂ ಸ್ಯಾಂ
ವೃಂದಾವನೇ ಕಿಮಪಿ ಗುಲ್ಮಲತೌಷಧೀನಾಮ್ ।
ಯಾ ದುಸ್ತ್ಯಜಂ ಸ್ವಜನಮಾರ್ಯಪಥಂ ಚ ಹಿತ್ವಾ
ಭೇಜುರ್ಮುಕುಂದ ಪದವೀಂ ಶ್ರುತಿಭಿರ್ವಿಮೃಗ್ಯಾಮ್ ॥

"ಪರಿತ್ಯಜಿಸಲಾಗದ ಪತಿ-ಸುತ-ಬಂಧುಗಳನ್ನೂ ಆರ್ಯಧರ್ಮಗಳನ್ನೂ ಪರಿತ್ಯಜಿಸಿ ಶ್ರುತಿ-ಸ್ಮೃತಿಗಳಿಂದ ಹುಡುಕಲ್ಪಡುತ್ತಿರುವ ಮುಕುಂದನ ಪರಮಪದವನ್ನು ಯಾರು ಸೇರಿಬಿಟ್ಟಿರುವರೋ, ಅಂತಹ ಗೋಪಿಯರ ಪಾದಧೂಳಿಯನ್ನು ಸತತವಾಗಿ ಸೇವಿಸುವ ವೃಂದಾವನದ ಯಾವುದಾದರೂ ಪೊದೆಗಳ ಅಥವಾ ಮರಗಿಡಬಳ್ಳಿಗಳ ಮಧ್ಯದಲ್ಲಿ ನಾನು ಹುಟ್ಟುವಂತಾಗಲಿ. ಮುಕುಂದನ ಪರಮಭಕ್ತೆಯರಾದ ಗೋಪಿಯರ ಪಾದಧೂಳಿಯ ಸತತ ಸೇವನೆಯಿಂದಲಾದರೂ ನನಗೆ ಆ ಪರಮಪದವು ಸಿಕ್ಕಬಹುದು." ಇದು ಉದ್ಧವನ ಉದ್ಗಾರ.

ಒಮ್ಮೆ ಶ್ರೀರಾಮಕೃಷ್ಣ ಪರಮಹಂಸರಿಗೆ ಒಂದು ವಿಲಕ್ಷಣ ದರ್ಶನವಾಯಿತಂತೆ. ಭಗವಂತನ ಪಾದಾರವಿಂದದಿಂದ ಹೊಮ್ಮಿದ ಅಲೌಕಿಕ ಪ್ರಭೆಯೊಂದು ಮೊದಲು ಶ್ರೀಮದ್ಭಾಗವತವನ್ನು ಸ್ಪರ್ಶಿಸಿ ಅನಂತರ ಭಕ್ತನ ಹೃದಯವನ್ನು ಪ್ರವೇಶಿಸಿ ಕಡೆಗೆ ಭಗವತ್ಪಾದಾರವಿಂದಗಳಲ್ಲಿಯೇ ಲೀನವಾಯಿತು. ಆದುದರಿಂದಲೇ ಅವರೆನ್ನುತ್ತಿದ್ದರು: ಭಾಗವತ, ಭಕ್ತ ಮತ್ತು ಭಗವಾನ್—ಈ ಮೂರೂ ಒಂದೇ ಶಕ್ತಿಯ ಮೂರು ರೂಪಗಳು ಎಂಬುದಾಗಿ.

"ಅತ್ಯಂತ ಪರಿಶುದ್ಧವಾದ ಭಾಗವತವು ವೈಷ್ಣವರಿಗೆ ಪ್ರಿಯವಾದುದು, ಪರಮಹಂಸ ಸಂಹಿತೆಯೂ ಇದಾಗಿದೆ. ಜ್ಞಾನ-ವೈರಾಗ್ಯ-ಭಕ್ತಿಗಳಿಂದ ಕೂಡಿದ ನೈಷ್ಕರ್ಮ್ಯವನ್ನು ಅಂದರೆ ಕರ್ಮಗಳ ಆತ್ಯಂತಿಕ ನಿವೃತ್ತಿಯನ್ನು ಇದು ಪ್ರಕಾಶಪಡಿಸುತ್ತದೆ. ಇದನ್ನು ಕೇಳುವವನೂ ಪಾರಾಯಣ ಮಾಡುವವನೂ ಮನನ ಮಾಡುವವನೂ ಭಕ್ತಿಯನ್ನು ಪಡೆದು ಮೋಕ್ಷವನ್ನು ಹೊಂದುವನು" ಎಂದು ಭಾಗವತದ ದ್ವಾದಶ ಸ್ಕಂಧದ ೧೩ನೇ ಅಧ್ಯಾಯದಲ್ಲಿ ಹೇಳಿದೆ:

ಯೋಗಿಯೋಗಾಧಿಗಮ್ಯಾಯ ಕೃಷ್ಣಾಯಾಮಿತತೇಜಸೇ ।
ಅನನ್ಯಭಕ್ತಿಲಭ್ಯಾಯ ತಸ್ಮೈ ಭಗವತೇ ನಮಃ ॥

(ಶ್ರೀಮದ್ರಾಘವೇಂದ್ರ ಭಾರತೀ)

"ಯೋಗಿಗಳು ತಮ್ಮ ಯೌಗಿಕ ದೃಷ್ಟಿಯಿಂದ ಕಾಣುವ ಅಪರಿಮಿತ ತೇಜಸ್ಸುಳ್ಳ, ಅನನ್ಯ ಭಕ್ತಿಯಿಂದ ಮಾತ್ರವೇ ಲಭಿಸತಕ್ಕ ಭಗವಾನ್ ಶ್ರೀಕೃಷ್ಣನಿಗೆ ವಂದನೆಗಳು."

ದೇವಕ್ಯಾನಕದುಂದುಭ್ಯೋಃ ಸುತಾಯಾನಂದದಾಯಿನೇ ।
ಶ್ರೀಕೃಷ್ಣಾಯ ನಮಸ್ತಸ್ಮೈ ಮಾಯಾವಿಗ್ರಹಶೋಭಿನೇ ॥

(ಶ್ರೀಮದ್ರಾಘವೇಂದ್ರ ಭಾರತೀ)

"ದೇವಕೀವಸುದೇವರಲ್ಲಿ ಜನಿಸಿ ಅವರಿಗೆ ಮಾಯಾಮಯವಾದ ಶರೀರವನ್ನು ತೋರಿಸಿ ಆನಂದವನ್ನು ನೀಡಿದ ಶ್ರೀಕೃಷ್ಣನಿಗೆ ವಂದನೆಗಳು."